ಸೋನಮ್‌ಳ

# ಲಡಾಖ್!

ಮನೀಶ್ ಲಖಾನಿ



ಕಥಾದಿಂದ ಒಂದು 300ಎಂ ಥಿಂಕ್‌ಬುಕ್



ನಾನು ಸೋನಮ್.
ನಾನು ಲಡಾಖ್‌ನಲ್ಲಿ ವಾಸಿಸುತ್ತೇನೆ.

ಮಿತ್ರ ಮನೀಶ್ ಲಖಾನಿ ಹಾಗೂ ಅವಳ
ಸಾಕುನಾಯಿಯ ಜೊತೆ ಸೋನಮ್.



ನಾನು ಐದನೇ ತರಗತಿಯಲ್ಲಿ ಓದುತ್ತಿದ್ದೇನೆ.

ನಾನು ನನ್ನ ಕುಟುಂಬದ ಪಶ್ಮೀನಾ
ಹಿಂಡುಗಳನ್ನೂ ನೋಡಿಕೊಳ್ಳುತ್ತೇನೆ.



ನಾನು ಚಾಂಗ್‌ಪಾ ಬುಡಕಟ್ಟಿಗೆ ಸೇರಿದವಳು.

ನಾವು ಅಲೆಮಾರಿ ಕುರುಬರು.



ಚಳಿಗಾಲಗಳಲ್ಲಿ, ಲಡಾಖ್‌ನಲ್ಲಿ ಎಲ್ಲವೂ ಹಿಮಗಟ್ಟಿರುತ್ತದೆ. ದೊಡ್ಡ ಜಲಪಾತಗಳೂ ಕೂಡ!

ಆದರೆ ಬೇಸಿಗೆಯ ತಿಂಗಳುಗಳಲ್ಲಿ ಲಡಾಖ್
ಬೆಚ್ಚಗಿರುತ್ತದೆ, ವರ್ಣಮಯವಾಗಿರುತ್ತದೆ!





ಇದು ಲಡಾಖ್‌ನಲ್ಲಿ ನನ್ನ ಅಚ್ಚುಮೆಚ್ಚಿನ
ಸರೋವರ. ಸೋ ಕಾರ್ ಸರೋವರ.



ಆಟ ಆಡುವುದು ನನಗೆ ಇಷ್ಟ! ನನ್ನ
ಸೈಕಲ್ ನನ್ನ ಅಚ್ಚುಮೆಚ್ಚಿನ ಗೆಳೆಯ.



ಆದರೆ ಬೇಸಿಗೆಯ ತಿಂಗಳುಗಳಲ್ಲಿ ಲಡಾಖ್
ಬೆಚ್ಚಗಿರುತ್ತದೆ, ವರ್ಣಮಯವಾಗಿರುತ್ತದೆ!



ಹಣದ ಪೆಟ್ಟಿಗೆಗಳಿಗಿಂತ ಕುರಿ, ಮೇಕೆ ಹಾಗೂ ನಾಯಿಗಳೇ ಉತ್ತಮ ಅಂತ ನನ್ನ ಅಜ್ಜಿ ಯಾವಾಗಲೂ ಹೇಳುತ್ತಾರೆ!



ನಾವು ಯಾಕ್ ಉಣ್ಣೆಯಿಂದ ಮಾಡಿದ
ಟೆಂಟುಗಳಲ್ಲಿ ವಾಸಿಸುತ್ತೇವೆ.
ಇದು ನಮ್ಮ ಅಡುಗೆಮನೆ.



ಯಾಕ್‌ಗಳು ನಮ್ಮ ಗೆಳೆಯರು.

ಆಹಾರ ಬೆಳೆದುಕೊಳ್ಳಲು ಅವು ನಮಗೆ ಸಹಾಯ ಮಾಡುತ್ತವೆ.


ಲಡಾಖ್‌ನಲ್ಲಿ ಬೇರೆಯ
ಪ್ರಾಣಿಗಳೂ ಇವೆ.


ಸಾಧು ಸ್ವಭಾವದ ಕುದುರೆಗಳು.


ಅಪರೂಪದ
ಯುರೇಶಿಯನ್
ನೀರುನಾಯಿ.



ಹಾಗೂ ಶಂಕು,
ಹಿಮಾಲಯದ ತೋಳ.



ಲಡಾಖ್‌ನಲ್ಲಿ ಹಲವು ವಿಹಾರಗಳಿವೆ.
ಇದು ತಿಕ್ಸೆ ವಿಹಾರ. ಇದು ಸಿಂಧೂ
ಕಣಿವೆಯಲ್ಲಿದೆ.



ಇದೆಲ್ಲಕ್ಕಿಂತ ಒಳ್ಳೆಯದು - ಲಡಾಖ್‌ನಲ್ಲಿ ನಕ್ಷತ್ರಗಳಿಂದ ತುಂಬಿದ ಪ್ರಶಾಂತ ರಾತ್ರಿಗಳು!



# ಹಿಮಾಲಯದ ಹೃದಯ!


ನಿಮ್ಮ ಪಟ್ಟಣ/ನಗರದಿಂದ
ಲಡಾಖ್‌ಗೆ ಹೋಗುವ
ಮಾರ್ಗವನ್ನು ಪತ್ತೆ ಮಾಡಿ.

# ಚಾಂಗ್‌ಪಾಗಳು

ಚಾಂಗ್‌ಪಾಗಳು ಅರೆ ಅಲೆಮಾರಿ ಬುಡಕಟ್ಟು ಜನಾಂಗದವರು. ಅವರು ಪ್ರಪಂಚದ ಅತ್ಯಂತ ತಂಪಾದ ಮರುಭೂಮಿಗಳಲ್ಲಿ ವಾಸಿಸುತ್ತಿದ್ದಾರೆ - ಅದು ಹಿಮಾಲಯದ ವಿಶಾಲವಾದ ಟಿಬೆಟಿಯನ್ ಪ್ರಸ್ಥಭೂಮಿ ಚಾಂಗ್‌ಥಾಂಗ್ ಎಂದು ಕರೆಯಲ್ಪಡುತ್ತದೆ.ಅದು ಟಿಬೆಟ್‌ನಿಂದ ಲಡಾಖ್ ವರೆಗೆ ವಿಸ್ತರಿಸಿಕೊಂಡಿದೆ.

ಚಾಂಗ್‌ಪಾಗಳು ಒಂದು ಹುಲ್ಲುಗಾವಲಿನಿಂದ
ಇನ್ನೊಂದರತ್ತ ಹೋಗುತ್ತಾರೆ, ಮಾಂಸ ಮತ್ತು
ಉಣ್ಣೆಯ ವ್ಯಾಪಾರ ಮಾಡುತ್ತಾರೆ.

ಚಾಂಗ್‌ಪಾಗಳು ಪಶ್ಮೀನಾ ಮತ್ತು ಯಾಕ್
ಉಣ್ಣೆಯೊಂದಿಗೆ ಅನೇಕ ಅದ್ಭುತವಾದ
ವಸ್ತುಗಳನ್ನು ನೇಯುತ್ತಾರೆ.



ಚಾಂಗ್‌ಪಾಗಳು ಬಾರ್ಲಿ, ಗೋಧಿ
ಮತ್ತು ಬಟಾಣಿ ಬೆಳೆಯುತ್ತಾರೆ.

# ಕರಗುತ್ತಿರುವ ಲಡಾಖ್‌ನ ಹಿಮನದಿಗಳು

ಲಡಾಖ್‌ನಲ್ಲಿ ಹಲವಾರು ಹಿಮನದಿಗಳಿವೆ. ನಮ್ಮೆಲ್ಲರಿಗೆ ಅವು ಬಹಳ ಮುಖ್ಯ. ಆದರೆ ಹೆಚ್ಚುತ್ತಿರುವ ಮಾಲಿನ್ಯ ಮತ್ತು ಅರಣ್ಯ ನಾಶದಿಂದ ಭೂಮಿ ಬಿಸಿಯಾಗುತ್ತಿದೆ ಮತ್ತು ಲಡಾಖ್‌ನ ಹಿಮನದಿಗಳು ಕರಗುತ್ತಿವೆ.

## ಯೋಚಿಸು

ಲಡಾಖ್‌ನ ಹಿಮನದಿಗಳು ಕರಗುವುದನ್ನು ತಪ್ಪಿಸಲು ನಾವು ಮಾಲಿನ್ಯವನ್ನು ಹೇಗೆ ಕಡಿಮೆ ಮಾಡಬಹುದು?

## ಕೇಳು

ನಮ್ಮ ಪರಿಸರವನ್ನು ಕಾಪಾಡಿಕೊಳ್ಳಲು ನಾವು ಏನು ಮಾಡಬಹುದು?


## ಚರ್ಚೆ ಮಾಡು

ನಿನ್ನ ಸ್ನೇಹಿತರೊಂದಿಗೆ ಸೇರಿ, ಮಾಲಿನ್ಯವನ್ನು ಕಡಿಮೆ ಮಾಡಲು ಆರು ತಿಂಗಳ ಯೋಜನೆಯೊಂದನ್ನು ರೂಪಿಸು.

## ಕೆಲಸ ಮಾಡು

ನಿನ್ನ ಕೈಲಾದಷ್ಟನ್ನು ಮಾಡು. ಸಣ್ಣ ಹೆಜ್ಜೆಗಳೊಂದಿಗೆ ಪ್ರಾರಂಭಿಸು.

- ಸಾಧ್ಯವಾದಷ್ಟು ಕಾಲ್ನಡಿಗೆ ಅಥವಾ ಸೈಕಲ್ ಬಳಸು.
- ವಿದ್ಯುತ್ ಬಳಕೆ ಕಡಿಮೆ ಮಾಡು.
- ತ್ಯಾಜ್ಯವನ್ನು ಮರುಬಳಕೆ ಮಾಡು.
- ಬಟ್ಟೆಯ ಚೀಲಗಳನ್ನು ಬಳಸು. ಪ್ಲಾಸ್ಟಿಕ್ "ಬೇಡ" ಎಂದು ಹೇಳು.
- ಗಿಡಗಳನ್ನು ನೆಡು.
- ಸ್ಥಳೀಯ ಆಹಾರವನ್ನು ಖರೀದಿಸು ಮತ್ತು ಬಳಸು.




ಬನ್ನಿ, ನನ್ನನ್ನು ಲಡಾಖ್
ನಲ್ಲಿ ನೋಡಿ!

ಮನೀಶ್ ಲಖಾನಿ: ಛಾಯಾಗ್ರಾಹಕರಾಗಿರುವ ಮತ್ತು ಸಾಹಸಗಳ ಬೆನ್ನಟ್ಟುವ ಮನೀಶ್ ಲಖಾನಿ ತಮ್ಮ ಕ್ಯಾಮೆರಾ, ಬೈಸಿಕಲ್ ಮತ್ತು ಪರ್ವತಗಳನ್ನು ಇಷ್ಟಪಡುತ್ತಾರೆ. ಪರ್ವತಗಳ ಮೇಲಿನ ಅವರ ಪ್ರೀತಿಯು ಅವರನ್ನು ಅನೇಕ ಬಾರಿ ಲಡಾಖ್‌ಗೆ ಕರೆದೊಯ್ದಿದೆ.

KATHA

ಕಥಾ ಒಂದು ಪ್ರಸಿದ್ಧಲಾಭರಹಿತ ಸಂಸ್ಥೆಯಾಗಿದ್ದು (www.katha.org), ಅಕ್ಷರಜ್ಞಾನದಿಂದಸಾಹಿತ್ಯದವರೆಗಿನ ಎಲ್ಲ ಕ್ಷೇತ್ರಗಳಲ್ಲಿ 1988ರಿಂದ ಕೆಲಸ ಮಾಡುತ್ತಿದೆ. ಸುಮಾರು 30 ವರ್ಷಗಳ ನಮ್ಮ ಅನುಭವವು ಬಡ ಮಕ್ಕಳ ಪುಸ್ತಕಮತ್ತು ಶಿಕ್ಷಣದ ಕ್ಷೇತ್ರದಲ್ಲಿದೆ.

"ಭಾರತದ ಕಿರೀಟದಲ್ಲೊಂದು ಶಿಕ್ಷಣದ ಆಭರಣ." - ನವೋಯುಕಿ ಶಿನೋಹರಾ, ಉಪ ವ್ಯವಸ್ಥಾಪಕ ನಿರ್ದೇಶಕರು, ಐಎಂಎಫ್

"ನಗರಗಳಲ್ಲಿನ ಸಾಮಾನ್ಯ ಮತ್ತು ಅನಿರೀಕ್ಷಿತ ದುಃಖಗಳೊಡನೆ ಸೆಣಸಾಡುವ ಜಗತ್ತಿನ ಎಲ್ಲ ಸೃಜನಶೀಲ ಯೋಜನೆಗಳಿಗೆ ಕಥಾ ಒಂದು ಉದಾಹರಣೆಯಾಗಿದೆ." - ಚಾರ್ಲ್ಸ್ ಲ್ಯಾಂಡ್ರಿ, ದಿ ಆರ್ಟ್ ಆಫ್ ಸಿಟಿ ಮೇಕಿಂಗ್

"ಕಥಾ ಮಕ್ಕಳ ಕುರಿತು ನಿಜವಾದ ಕಾಳಜಿ ಇಟ್ಟುಕೊಂಡಿದೆ. ಅದಕ್ಕಾಗಿಯೇ ಅದು ... ಮಕ್ಕಳಿಗಾಗಿ ಅಷ್ಟೊಂದು ಸುಂದರವಾದ ಚಿತ್ರದ ಪುಸ್ತಕಗಳನ್ನು ರೂಪಿಸುತ್ತದೆ." - ಟೈಮ್ ಔಟ್

"ಮಕ್ಕಳು [ತಮ್ಮ ಪುಸ್ತಕಗಳಲ್ಲಿ] ಮಾಡುವಂತೆಯೇ ತಮ್ಮ ಸಮುದಾಯಗಳಲ್ಲಿ ಮುಂದುವರೆಯುವಂತಹ ಮತ್ತು ನಿಜವಾದ ಬದಲಾವಣೆ ತರಬಹುದು ಎಂಬ ಭಾವನೆ ಕಥಾದ ಕೆಲಸಕ್ಕೆ ಚಾಲನೆ ನೀಡುತ್ತದೆ." - ಪೇಪರ್‌ಟೈಗರ್ಸ್

ಈ ಆವೃತ್ತಿ ಮೊದಲ ಬಾರಿಗೆ 2021ರಲ್ಲಿ ಪ್ರಕಟವಾಯಿತು
ಪಠ್ಯದ ಕಾಪಿರೈಟ್ © ಮನೀಶ್ ಲಖಾನಿ
ಪಠ್ಯದಕಾಪಿರೈಟ್©ಸುನೈನಾಅಲಿ
ಛಾಯಾಚಿತ್ರಗಳ ಕಾಪಿರೈಟ್ © ಮನೀಶ್ ಲಖಾನಿ
ಎ3, ಸರ್ವೋದಯ ಎನ್‌ಕ್ಲೇವ್, ಶ್ರೀ ಅರವಿಂದೋ ಮಾರ್ಗ, ನವದೆಹಲಿ 110 017
ದೂರವಾಣಿ: 91-11 4141 6600 . 4141 6610
ಇ-ಮೇಲ್: editors@katha.org, ವೆಬ್‌ಸೈಟ್: www.katha.org
ಐಎಸ್‌ಬಿಎನ್ 978-93-82454-65-6

ನಮ್ಮ ಧ್ಯೇಯ: ಪ್ರತಿಯೊಂದು ಮಗುವೂ ಚೆನ್ನಾಗಿ ಓದಬೇಕು, ಖುಷಿಗಾಗಿ ಓದಬೇಕು!

ಕಥಾ ಎಂಬುದು 1988ರಲ್ಲಿ ಪ್ರಾರಂಭವಾದ ಒಂದು ನೋಂದಾಯಿತ, ಲಾಭರಹಿತ ಸಂಸ್ಥೆ. ನಾವು ಅಕ್ಷರಜ್ಞಾನದಿಂದ ಸಾಹಿತ್ಯದವರೆಗಿನ ಎಲ್ಲ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತೇವೆ. ಮಕ್ಕಳು ಮತ್ತು ವಯಸ್ಕರಲ್ಲಿ ಓದುವ ಸಂತೋಷವನ್ನು ಹೆಚ್ಚಿಸುವ ಉದ್ದೇಶ ಇಟ್ಟುಕೊಂಡಿರುವ ನಾವು, ಗುಣಮಟ್ಟದ ಪುಸ್ತಕಗಳು ಮತ್ತು ಸಹಾಯದ ಮೂಲಕ 1,00,000ಕ್ಕೂ ಹೆಚ್ಚು ಬಡ ಮಕ್ಕಳನ್ನು ಗ್ರೇಡ್ ಮಟ್ಟದ ಓದುವಿಕೆಗೆ ಕರೆತರಲು ಅವರೊಂದಿಗೆ ಕೆಲಸ ಮಾಡುತ್ತೇವೆ.

ಎಲ್ಲ ಹಕ್ಕುಗಳನ್ನೂ ಕಾಯ್ದಿರಿಸಲಾಗಿದೆ. ಈ ಪುಸ್ತಕದ ಯಾವುದೇ ಭಾಗವನ್ನು ಪ್ರಕಾಶಕರ ಲಿಖಿತ ಅನುಮತಿಯಿಲ್ಲದೆ ಯಾವುದೇ ರೂಪದಲ್ಲಿ ಮರುಬಳಕೆ ಮಾಡುವಂತಿಲ್ಲ ಅಥವಾ ಬಳಸಿಕೊಳ್ಳುವಂತಿಲ್ಲ.


ಈ ಪುಸ್ತಕಗಳ ಮಾರಾಟದಿಂದ ಬರುವ ಒಟ್ಟು ಆದಾಯದ 10% ಮೊತ್ತವು, ಸವಲತ್ತುಗಳಿಲ್ಲದ ಮಕ್ಕಳ ಓದುವಿಕೆ ಮತ್ತು ಜೀವನ ಪರ್ಯಂತದ ಕಲಿಕೆಯ ಕಾರ್ಯಕ್ರಮಗಳನ್ನು ಬೆಂಬಲಿಸುತ್ತದೆ.





ಐ ಲವ್ ರೀಡಿಂಗ್ ಲೈಬ್ರರಿ ಒಂದು ಅನನ್ಯ ಪುಸ್ತಕಗಳ ಸರಣಿಯಾಗಿದ್ದು, ಅದು ಹೊಸ ಮತ್ತು ಸಂಕೋಚ ಸ್ವಭಾವದ ಓದುಗರನ್ನು ಸುಲಭವಾಗಿ ಓದುವಂತೆ ಮಾಡುತ್ತದೆ. ಓದಿನ ವಿಭಿನ್ನ ಹಂತದಲ್ಲಿರುವ ಮಕ್ಕಳ ಕಲಿಕೆಯ ಅಗತ್ಯಗಳಿಗೆ ಸರಿಹೊಂದುವಂತೆ ಉತ್ತಮ ಗುಣಮಟ್ಟದ ವಿಷಯ ಮತ್ತು ವಿನ್ಯಾಸದೊಂದಿಗೆ, ಇದು ಭಾರತ ಮತ್ತು ಪ್ರಪಂಚದ ಅತ್ಯುತ್ತಮ ಸಾಹಿತ್ಯಕ ರಚನೆಗಳು ಮತ್ತು ಕಲಾಕೃತಿಗಳನ್ನು ಒಟ್ಟಿಗೆ ತರುತ್ತದೆ. ನಮ್ಮ ಪುಸ್ತಕಗಳು ಗೀತಾ ಧರ್ಮರಾಜನ್‌ರ ಅನನ್ಯ ಶಿಕ್ಷಣ ಮಾದರಿಯಾದ "ಸ್ಟೋರಿಪೆಡಗಾಜಿTM" ಯ ಸ್ವರೂಪ ಪಡೆದಿವೆ, ಈ ಮಾದರಿಯುವಿಶೇಷವಾಗಿ ಮೊದಲ ತಲೆಮಾರಿನ ಓದುಗರಲ್ಲಿ ಓದಿನ ಸಂತೋಷವನ್ನು ಉತ್ತೇಜಿಸುತ್ತದೆ ಹಾಗೂ ಮಗುವನ್ನು ಬಿಗ್ ಐಡಿಯಾಸ್ ಮತ್ತು TA-DAAಗಳ (ಥಿಂಕ್, ಆಸ್ಕ್, ಡಿಸ್ಕಸ್, ಆಕ್ಟ್ ಹಾಗೂ ಅಚೀವ್) ಆಕರ್ಷಕ ಜಗತ್ತಿಗೆ ಕರೆದೊಯ್ಯುತ್ತದೆ!

ಕಥಾದ ಹೋಲಿಸ್ಟಿಕ್ ಅರ್ಲಿ ಲರ್ನಿಂಗ್ (KHEL!) ಲ್ಯಾಬ್ ಸರ್ಕಾರಿ, ಲಾಭೋದ್ದೇಶವಿಲ್ಲದ ಮತ್ತು ಖಾಸಗಿ ಶಾಲೆಗಳಲ್ಲಿನ ಶಿಕ್ಷಕರಿಗೆ ಕಾರ್ಯಾಗಾರಗಳನ್ನು ನಡೆಸುತ್ತದೆ. ಆನ್‌ಲೈನ್ ಸೆಶನ್‌ಗಳಿಂದ ಬೆಂಬಲಿತವಾದ ಈ F2F (ಫೇಸ್-ಟು-ಫೇಸ್) ಕಾರ್ಯಾಗಾರಗಳು ಶಿಕ್ಷಕರು, ಶಾಲಾ ಆಡಳಿತಾಧಿಕಾರಿಗಳು ಹಾಗೂ ಸ್ವಯಂಸೇವಕರಿಗೆ "ರೀಡಿಂಗ್ ಟೀಚರ್ಸ್ ಪ್ರಮಾಣಪತ್ರ"ವನ್ನು ದೊರಕಿಸಿಕೊಡುತ್ತವೆ. ಇನ್ನಷ್ಟು ತಿಳಿದುಕೊಳ್ಳಲು, 300m@katha.org ಸಂಪರ್ಕಿಸಿ


ಈ ಎಲ್ಲ ಐಎಲ್‌ಆರ್ ಪುಸ್ತಕಗಳನ್ನು ಇಂಡಿಗೋ ಸರಣಿಯಲ್ಲಿ ಸಂತೋಷ ಮತ್ತು ಆಶ್ಚರ್ಯಕ್ಕಾಗಿ ಓದಿ



































FOR OUR BOOKS

www.books.katha.org

"ಕಥೆಗಳ ಮೂಲಕ ಭಾರತದ ಬಹುಸಂಸ್ಕೃತಿಯ ಅನನ್ಯತೆ."
- ದ ಪಯನಿಯರ್

ಮಕ್ಕಳಿಗಾಗಿ
ಒಂದು ಕಥಾ ಪುಸ್ತಕ
ISBN 978-93-88284-81-3
9 789388 284813
www.katha.org
` xxx